Regd No B G 155 1-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಸೈಕಲ್ ತೆರಿಗೆ ವಜಾ – ಸರ್ಕಾರದ ಒಪ್ಪಿಗೆ

ರಾಜ್ಯದ ಎಸ್ ಸಿ

ಬೆಂಗಳೂರು— ನವದೆಹಲಿಯಲ್ಲಿ ರಿಪಬ್ಲಿಕ್ ಡೇ ಯಂದು ಭಾಗವಹಿಸಿದ ಎಸ್ ಸಿ ಪಡೆಯು ಭಾರತದ ಅತ್ಯುತ್ತಮ ಪಡೆಗಳಲ್ಲಿ ದ್ವಿತೀಯ ಸ್ಥಾನ ಪಡೆಯಿತು.

○

ಮಂತ್ರಿಮಂಡಲದಲ್ಲಿ ಕನ್ನಡ ಬರದವರು

ಬೆಂಗಳೂರು— ಮಂತ್ರಿ ಶ್ರೀ ಮಹಮದ್ ಆಲಿ, ಉಪಮಂತ್ರಿಗಳಾದ ಶ್ರೀ ಡಿ ಬಿ ಪವಾರ್ ಮತ್ತು ಶ್ರೀ ಮಾಣಿಕ್ ರಾವ್ ಪಾಟೀಲರಿಗೆ ಕನ್ನಡ ಓದಲೂ ಬರೆಯಲೂ ಬರುವುದಿಲ್ಲವೆಂದು ವಿಧಾನಸಭೆಯಲ್ಲಿ ತಿಳಿಸಲಾಯಿತು.

○

ಕಾಂಗ್ರೆಸ್ ಚುನಾವಣಾ ಗುರುತು

ನವದೆಹಲಿ— ಹೊಸ ಕಾಂಗ್ರೆಸ್ಸು ನ್ಯಾಯಬಾಹಿರವೆಂದೂ, ಇದಕ್ಕೆ ಕಾಂಗ್ರೆಸ್ಸು ಗುರುತು ಕೇಳಲು ಹಕ್ಕಿಲ್ಲವೆಂದೂ ಹಳೇ ಕಾಂಗ್ರೆಸ್ ಪರ ಚುನಾವಣಾ ಕಮಿಷ್ಣರ್ ಮುಂದೆ ವಾದಿಸಲಾಯಿತು – ಈ ಬಗ್ಗೆ ಹಳೇ ಕಾಂಗ್ರೆಸ್ ಸಂಬಂಧದ ಲೋಕಪದೋಷಗಳನ್ನು ವಿವರಿಸಿ, ಶೀಘ್ರದಲ್ಲೇ ಆಜ್ಞೆ ಕೊಡಬೇಕೆಂದು ಹೊಸ ಕಾಂಗ್ರೆಸ್ಸು ಪರ ತಿಳಿಸಲಾಯಿತು

○

ಅನ್ನಸತ್ಯಾಗ್ರಹ ಶಿಬಿರ

ಹೈದರಾಬಾದು— ಅಬಿಡ್ ರಸ್ತೆಯಲ್ಲಿ ಶ್ರೀ ಜವಹರಲಾಲರವರ ಸ್ವಾಸ್ಥ್ಯಕ್ಕೂ ಕೆಳಗೆ ಒಂದು ಅನ್ನಸತ್ಯಾಗ್ರಹ ಶಿಬಿರವೇ ನಿರ್ಮಿಸಲಾಗಿದೆ – ಪ್ರತ್ಯೇಕ ತೆಲಂಗಾಣಾಕ್ಕಾಗಿ ತೆಲಂಗಾಣಾ ಶಾಸಕರ ರಾಜೀನಾಮೆ ಕೇಳಿಕೆ ಹಾಕಿ ಒಬ್ಬ ವಿದ್ಯಾರ್ಥಿ ಅನಿರ್ದಿಷ್ಟ ಕಾಲದ ಉಪವಾಸ ಕೈಗೊಂಡಿದ್ದಾನೆ – ಸಹಾನುಭೂತಿಯಿಂದ ಅನೇಕ ವಿದ್ಯಾರ್ಥಿಗಳು ಒಂದು ದಿನದ ಉಪವಾಸ ಕೈಗೊಂಡಿದಾರೆ.

ಆಹಾರಧಾನ್ಯದ ಆಮದು

ಕಾನ್ಪುರ— ಆಹಾರಧಾನ್ಯಗಳ ಆಮದನ್ನು ಈ ವರ್ಷ ನಿಲ್ಲಿಸಲಾಗುವುದೆಂದು ಪ್ರಧಾನಿ ಇಂದಿರಾರವರು ಫತೇಪುರ್‌ದಲ್ಲಿ ಒದುಬಹಿರಂಗ ಸಭೆಯಲ್ಲಿ ಹೇಳಿದರು—

★

ಪಾಕ್ ದೋಣಿಗಳು

ರಾಜಕೋಟಿ— ಕಚ್ ತೀರದಲ್ಲಿ ಭಾರತದ ನೀರಿಗೆ ಬಂದ ಎರಡು ಪಾಕಿ ಸ್ತಾನ ದೋಣಿಗಳು ಹಿಡಿಯಲ್ಪಟ್ಟವು.

★

ಅಗ್ನಿ ದೇವಾಲಯ

ಅಜರಬೈಜಾನಿನಲ್ಲಿಯ ಹಿಂದೂ ದೇವಾಲಯ ಅತೆಷ್ಕಾಕ್ (ಅಗ್ನಿ ಮಂದಿರ) ದಲ್ಲಿ ಗರ್ಭಗುಡಿಯಲ್ಲಿ 70 ವರ್ಷಗಳಿಂದ ನಿಂತುಹೋಗಿದ್ದ ಅಗ್ನಿಯ ನಾಲಿಗೆಗಳು ಮತ್ತೆ ಆನಂದದಿಂದ ಕುಣಿದಾಡುತ್ತಿವೆ.

ಅಜರಬೈಜಿನ ಅಫ್ಶೆರ್ನ್ ಪರ್ಯಾಯ ದ್ವೀಪದಲ್ಲಿ 17–18 ನೇ ಶತಮಾನದಲ್ಲಿ ಕಟ್ಟಲಾದ ಈ ದೇವಾಲಯವು ಈಗ ರಾಜ್ಯ ರಕ್ಷಣೆಯಲ್ಲಿದ್ದು ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಗರ್ಭಗುಡಿಯಲ್ಲಿರುವ ಒಂದು ಶಾಸನ ರೀತ್ಯಾ ಈ ದೇವಾಲಯ ಕಟ್ಟಲು ಒಬ್ಬ ಭಾರತೀಯ ವರ್ತಕ ಕಾಂಚನಗಾರ ಹಣ ದಾನಮಾಡಿದನೆಂದು ತಿಳಿಯಬರುತ್ತದೆ.

★

ದಿವ್ಯವಾಣಿ

ದ್ವೇಷವು ದ್ವೇಷದಿಂದ ಶಾಂತಿ ಹೊಂದುವುದಕ್ಕೂ ಪ್ರೀತಿಯಿಂದ ಶಾಂತಿ ಹೊಂದುವುದಕ್ಕೂ ವ್ಯತ್ಯಾಸವಿದೆ. ದ್ವೇಷವು ದ್ವೇಷಕ್ಕೆ ನುಯ್ತೀರಿಸುವುದಾಗಿದೆ ಪ್ರೀತಿಯು ಪ್ರೀತಿಯಿಂದ ಪಾನಮಾಡುವುದಾಗಿಯೂ ಇದೆ.

ಅಗ್ನಿ ಕುಂಡ

ಅಮೃತಸರ— ಅಕಾಲಿ ನಾಯಕ ಸಂತ್ ಫತೇಸಿಂಗರ ಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡುವ ನಿರ್ಧಾರ ನಿಂತಿದ್ದರೂ ಮೂರು ಅಗ್ನಿಕುಂಡಲಗಳನ್ನು ತೆಗೆದುಹಾಕಲು ಯೋಚಿಸಿಲ್ಲ. ಇವು ಮುಂದೆ ಬೇಕಾದೀತೆಂದ ಅಕಾಲಿ ದಳದ ಓರ್ವ ಹಿರಿಯರು ಹೇಳಿದರು.

○

ಹರಯಾಣಾದಲ್ಲಿ ನಿನ್ನೆ

ಚಂಡೀಘರ್— ಹರಯಾಣಾದಲ್ಲಿ ಗಲಭೆಗಳು ನಡೆದವು – ಮೂರು ಕಡೆ ಪೋಲೀಸರು ಗೋಳೀಬಾರು ಮಾಡಿದರು ; ಒಬ್ಬ ಸತ್ತು, ಒಬ್ಬ ಗಾಯಗೊಂಡ – ರೈಲ್ವೆ ಮತ್ತಿತರ ಸರಕಾರಿ ಆಸ್ತಿ ಮೇಲಿನ ಭೀಕರ ಧಾಳಿ ಮುಂದುವರಿಯುತ್ತಿದ್ದರಿಂದ ಹಿಸ್ಸಾರು ಪಟ್ಟಣದ ಶಾಂತಿ ಶಿಸ್ತು ಪಾಲನೆಯನ್ನು ಸೈನ್ಯಕ್ಕೆ ಒಪ್ಪಿಸಿದ್ದು ಆಮೇಲೆ ಸಿವಿಲ್ ಆಡಳಿತಗಾರರೇ ವಹಿಸಿಕೊಂಡರೆಂದು ವರದಿಯಾಗಿದೆ – ಗಲಭೆ ಪ್ರಾರಂಭವಾದಂದಿನಿಂದ ಇಬ್ಬರು ಮಾಜಿ ಮಂತ್ರಿಗಳೂ ಸೇರಿ 500 ಮಂದಿ ಬಂಧಿಸಲ್ಪಟ್ಟಿರುವರು – ಅನೇಕ ರೈಲುಗಳ ಓಡಾಟ ನಿಲ್ಲಿಸಲ್ಪಟ್ಟಿತ್ತು – ಗುರಗಾಂನಲ್ಲಿ ಕುಪಿತ ಗುಂಪು ಒಂದು ಸರ್ಕಾರಿ ಆಫೀಸಿಗೆ ಬೆಂಕಿ ಇಟ್ಟು. ಅಂಗಡಿಗಳನ್ನು ಲೂಟಿಮಾಡಿತು.

●

ರಕ್ಷಣಾ ವೆಚ್ಚದಲ್ಲಿ ಖೋತಾ

ವಾಷಿಂಗ್ಟನ್— ಅಮೇರಿಕಾದ ರಕ್ಷಣಾ ಖರ್ಚನ್ನು 6849 ಮಿಲಿಯ ಡಾಲರು (ರೂ 43870 ಮಿಲಿಯ) ತಗ್ಗಿಸಲು ಅಧ್ಯಕ್ಷ ನಿರ್ಕ್ಸ್ ಸೂಚಿಸಲಿರುವರು.

●

ಶತಮಾನೋತ್ಸವ

ಮುನಿಸಿಪಾಲಿಟಿ— ಮುನಿಸಿಪಾಲಟಿಯ ಶತಮಾನೋತ್ಸವವನ್ನು ಈ ವರ್ಷ ನೆರವೇರಿಸಲು ನಿರ್ಧರಿಸಲಾಗಿದೆ.

ಪುರಸಭೆ

ಮೈಸೂರು— ರಾಜ್ಯ ಸರಕಾರವು ಮೈಸೂರಿನಲ್ಲಿ ಸೈಕಲ್ ತೆರಿಗೆ ವಜವನ್ನು ಅನುಮೋದಿಸಿದೆ ಎಂಬ ವಿಷಯವನ್ನು ಪುರಸಭಾ ಮಾಟಿಂಗಿನಲ್ಲಿ ಅಧ್ಯಕ್ಷ ಶ್ರೀ ಬಿ ಕೆ ಪುಟ್ಟಯ್ಯನವರು ತಿಳಿಸಿದರು – ಈ ತೆರಿಗೆಯನ್ನು ವಜಾ ಮಾಡಲು ಕಳೆದ ವರ್ಷ ಸಭೆಯು ಸರ್ವಾನುಮತದಿಂದ ನಿರ್ಧರಿಸಿತ್ತು : ಅದಕ್ಕಾಗಿ ಸರಕಾರದ ಅನುಮತಿ ಕಾಯುತ್ತಾ ಈ ವರ್ಷ ತೆರಿಗೆ ವಸೂಲ್ಮಾಡಲಿಲ್ಲ – ನಗರದಲ್ಲಿ 35000 ಸೈಕಲ್‌ಗಳಿದ್ದು, ಮುನಿಸಿಪಾಲಿಟಿಗೆ ಸುಮಾರು ರೂ 1 ಲಕ್ಷ ಆದಾಯವಿತ್ತು – ತಮಿಳುನಾಡು ಸರಕಾರದ ಕನ್ನಡ ಚಳವಳಗಾರರ ಮೇಲಿನ ದಬ್ಬಾಳಿಕೆಯನ್ನು ಖಂಡಿಸಿ, ಬಂಧಿಸಲಾಗಿರುವ ಶಾಕಸ ಶ್ರೀ ವಾಟಾಲ್ ನಾಗರಾಜರನ್ನೂ ಮತ್ತಿತರನ್ನೂ ಬಿಡುಗಡೆ ಮಾಡಲು ಶ್ರೀ ಶ್ರೀಕಂಠಶರ್ಮರು ಕರೆ ಕೊಟ್ಟರು – ತೆರಿಗೆ ಬಾಕಿಯ ಮೇಲೆ ಶೇ ಕಡೆ 6 ಬಡ್ಡಿ ವಿಧಿಸುವದನ್ನು ವಿರೋಧ ನಾಯಕ ಶ್ರೀ ಬಿ ಎಸ್ ಕೆಂಗೇಗೌಡರು ವಿರೋಧಿಸಿದರು – ಶ್ರೀ ಬಿ ಸಿ ಲಿಂಗಯ್ಯನವರು ಆಡಳಿತ ಪಕ್ಷದ ನಾಯಕರಾಗಿ ಆಯ್ಕೆಯಾದರು

○

ಪ್ರಧಾನಿಗಳಿಂದ ಆಹ್ವಾನ

ಹೈದರಾಬಾದು— ತೆಲಂಗಾಣಾ ಪ್ರತ್ಯೇಕ ಸಮಿತಿ ಅಧ್ಯಕ್ಷ ಶ್ರೀ ಚಕ್ರವರ್ತಿಯವರನ್ನು ತಾ|| 4 ರಂದು ತೆಲಂಗಾಣಾ ಪರಿಸ್ಥಿತಿ ಚರ್ಚಿಸಲು ಪ್ರಧಾನಿ ಇಂದಿರಾರು ಆಹ್ವಾನಿಸಿರುವರು.

★

ಬೀಹಾರು ಮಂತ್ರಿಮಂಡಲ

ಪಾಟ್ನಾ— ಬೀಹಾರಿನಲ್ಲಿ ಎಸ್ಸೆಸ್ಪಿ ನೇತೃತ್ವದಲ್ಲಿ ಸಂಯುಕ್ತ ಮಂತ್ರಿಮಂಡಲ ಸ್ಥಾಪನೆ ಪ್ರಯತ್ನ ನಡೆಯುತ್ತಿದೆ.

★

ಸೌಂದರ್ಯ ರಕ್ಷಣೆಯಲ್ಲಿ ಮೈಸೂರು ಶ್ರೀಗಂದದ ಸಾಬೂನಿಗಿಂತ ಮಿಗಿಲಾದ ಸಾಬೂನು ಮತ್ತೊಂದು ಇಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗನ್ನು ನೀಡುತ್ತದೆ.

ಆಧ್ಯೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ

●★●

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು 12

ಬಸ್, ಕಾರ್ ಅನಾಹುತ

ತೆಹರ್ಾ— ಮೇಲಿಂದ ಭೀಕರವಾಗಿ ಹಿಮದ ರಾಶಿಯಿಂದ ಅಮಾಲ್ ಸೆದ್ದಾರಿಯಲ್ಲಿ 8 ಬಸ್ಸು 8 ಕಾರುಗಳೂ ಆಳವಾದ ಕೊರಕಲಿಗೆ ಬಿದ್ದು 35 ಮಂದಿ ಸತ್ತು 400 ಮಂದಿ ಅಲ್ಲಿ ಸಿಕ್ಕಿಬಿದ್ದರು.

ಉಜ್ಜಯಿನಿ— 'ಇಂಗ್ಲೀಷು ತೆಗೆಯಿರಿ' ಸೇನೆಯನ್ನು ಸಮಾಜವಾದಿ ಸಂಘ ಸ್ಥಾಪಿಸಿದೆ

ವುಡ್‌ಲಾಂಡ್ ಅಮೋಘ 5 ನೇ ವಾರ

ಶಿ ನಿ ಅಮೋಘ ಪ್ರಾರಂಭ

.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 2ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ನಿರ್ಮಾಪಕ : ನರಸಿಂಹರಾಜು ರಂಗ ವೆಂಕಟೇಶ್

ಕಥೆ — ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ದಿಗ್ದರ್ಶನ : ಎ. ನಾಗರಾಜ್

ದಿನ 3 ಆಟಗಳು

SHAKTI SUDHA

A Superb Tonic



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Edited, Printed & Published by Dharmaprachara Nirata M. S. Krishna Rao (Proprietor) at the Satvavadi Press Shankarapuram, Mysore 4